ಮತ್ತು ಕುಟುಂಬದ ಮಂದಿ ಬಿಡುಗಡೆಯಾಗುವ ಆಸೆಯ ಕಂಗಳಿಂದ ಸ್ವಾಮೀಜಿಯತ್ತ ನೋಡಿದರು.

'ಮಕ್ಕಳೇ ನಿಮಗೇಕೆ ಈ ಗತಿ ಬಂದಿತು?' ಎಂದು ಸ್ವಾಮೀಜಿ ಪ್ರಶ್ನಿಸಿದರು.

ಸೋಮಶೇಖರ ನಡೆದ ಘಟನೆಗಳನ್ನು ಚಾಚೂ ತಪ್ಪದೆ ಹೇಳಿದನು. ಆಗ ಸ್ವಾಮೀಜಿ, '...ನೋಡು ಭಗವದ್ಭಕ್ತ, ಒಂದು ವಿಷಯ ಸರಿಯಾಗಿ ನೆನಪಿಟ್ಟುಕೋ, ಕೇವಲ ತೀರ್ಥ ಯಾತ್ರೆ, ಪೂಜೆ ಪುನಸ್ಕಾರವೆಂದು ಗೌಜಿ ಗದ್ದಲದ ಜೀವನ ನಡೆಸುವುದಲ್ಲ. ತನ್ನ ಸಂಪತ್ತನ್ನು ಕೇವಲ ಸ್ವಾರ್ಥ ಹಾಗೂ ಆಡಂಬರದ ಜೀವನಕ್ಕೆ ಉಪಯೋಗಿಸುವುದಲ್ಲ. ಅದರಿಂದ, ದೀನರಿಗೆ, ಕಷ್ಟದಲ್ಲಿರುವವರಿಗೆ, ದೇಹಿ ಎಂದು ಬೇಡಲು ಬರುವ ಸಪಾತ್ರರಿಗೆ ಸ್ವಲ್ಪವಾದರೂ ಸಹಾಯಮಾಡಬೇಕಾದ್ದು ನಿಮ್ಮಂತಹ ಶ್ರೀಮಂತರ ಕರ್ತವ್ಯವಾಗಬೇಕಾಗಿತ್ತು. ಅದಕ್ಕೇ ನಿನಗೆ ತಿಳಿವಳಿಕೆ ಬರಲೆಂದು ದೇವರೇ ಈ ರೀತಿ ಶಿಕ್ಷೆ ಕೊಟ್ಟಿರಬೇಕು' ಎನ್ನುತ್ತಾ ಸ್ವಾಮೀಜಿ ಒಂದು ಕ್ಷಣ ಮಾತು ನಿಲ್ಲಿಸಿದರು.

ಸೋಮಶೇಖರನ ಕಣ್ಣಂಚಿನಲ್ಲಿ ನೀರು ಕಾಣಿಸುತ್ತಿತ್ತು. ಅವನು ಹೇಳಿದನು, 'ಸ್ವಾಮೀಜಿ, ನನಗೆ ಈಗ ಅನ್ನಿಸುತ್ತದೆ, ನಾನು ಮಾಡಿರುವುದು ಬಹಳ ದೊಡ್ಡ ತಪ್ಪು. ಒಂದಲ್ಲ, ಎರಡಲ್ಲ... ಹಲವು ಬಾರಿ ಸಪಾತ್ರರು, ಕಷ್ಟದಲ್ಲಿ ಇರುವವರು ನನ್ನ ಬಳಿಗೆ ಸಹಾಯಕ್ಕಾಗಿ ಬಂದಾಗ ನಾನು ಅವರನ್ನು ತಿರಸ್ಕರಿಸಿದ್ದು ಮಾತ್ರವಲ್ಲ, ಬೈದು ಹಂಗಿಸಿ ಕಳಿಸುತ್ತಿದ್ದೆ. ಅದರ ಫಲವಾಗಿಯೇ ಎಂಬಂತೆ, ತಾವು ಹೇಳಿದ ಹಾಗೆ ದೇವರೇ ನನಗೆ ಇವತ್ತು ಸರಿಯಾದ ಶಿಕ್ಷೆ ಕೊಡಿಸಿರಬೇಕು. ಸ್ವಾಮೀಜಿ ತಾವು ಮಹಾತ್ಮರು... ಜ್ಞಾನಿಗಳು... ತಮ್ಮ ಇದಿರಿನಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ. ಇನ್ನು ಮುಂದೆ, ಈ ಕ್ಷಣದಿಂದ ನನ್ನ ಜಿಪುಣತನ ಹಾಗೂ ದಾರ್ಷ್ಟ್ಯತನ ಬಿಟ್ಟು ದೇವರು ಕೊಟ್ಟ ಐಶ್ವರ್ಯವನ್ನು ಎಲ್ಲರ ಒಳಿತಿಗಾಗಿ ವಿನಿಯೋಗ ಮಾಡುತ್ತಾ ಬದುಕುತ್ತೇನೆ. ನನ್ನನ್ನು ನಂಬಿ' ಎಂದು ಗೋಗರೆದನು.

ಸೋಮಶೇಖರನ ಅತ್ಯಂತ ಕಳಕಳಿ ಹಾಗೂ ವಿನೀತ ಭಾವದಲ್ಲಿ ಬದಲಾದ ಮನಸ್ಥಿತಿ ಇತ್ತು. ಇದನ್ನು ಗಮನಿಸಿದ ಸ್ವಾಮೀಜಿ, ಆಯಿತು ಭಕ್ತ, 'ನಿನ್ನ ಬದಲಾವಣೆಗೆ ದೇವರು ಖಂಡಿತಾ ಮೆಚ್ಚುವರು'.ಅವರೆಲ್ಲರನ್ನು ಬಂಧಿಯಾಗಿದ್ದ ಹಗ್ಗಗಳನ್ನು ಬಿಡಿಸಿ ಆಶೀರ್ವದಿಸಿ ಕಳುಹಿಸಿ ಕೊಟ್ಟರು.

ಅಂದಿನಿಂದ ಸೋಮಶೇಖರನು ಪರೋಪಕಾರಿಯೂ ಜನಾನುರಾಗಿಯೂ ಆಗಿ ಖ್ಯಾತಿಯನ್ನು ಪಡೆಯುತ್ತಾ ಬದುಕಿದನು.

ರಾಜಶೇಖರನು ಅವನನ್ನು ಭೇಟಿಯಾದಾಗಲೆಲ್ಲ ತನ್ನ ಸ್ವಾಮೀಜಿಯ ವೇಷ ನೆನಪಾಗುತ್ತಿತ್ತು.ತನಗೆ ಆ ರೀತಿ ವರ್ತಿಸಲು ಬುದ್ಧಿ ಕೊಟ್ಟ ದೇವರಿಗೆ ಮನಸಾರೆ ವಂದಿಸುತ್ತಿದ್ದನು.

■ **ವಿ. ಸುಬ್ರಹ್ಮಣ್ಯ ಭಟ್**

# ಮಕ್ಕಳೆಲ್ಲ ಬನ್ನಿರಿ



ಶಿಲ್ಪಾ ಕಬ್ಬಿಣಕಂತಿ

ಹೊಸತು ಆಟ ಆಡುವಾ
ಎಲ್ಲರೊಡನೆ ಆಡಿ ಕುಣಿದು
ಹಿರಿಯರನ್ನು ಗೆಲ್ಲುವಾ !
ಬೇಡ ನಮಗೆ ದ್ವೇಷ ರೋಷ
ಪ್ರೀತಿ ಪ್ರೇಮ ಗಳಿಸುವಾ
ಜಾತಿ ಧರ್ಮ ಹಂಗು ಬೇಡ
ಮಾನವೀಯತೆಯ ಬೆಳೆಸುವಾ!
ಹೊರಗೆ ನೋಡಿ ಬೇಸಿಗೆ
ಬಿಸಿಲ ಧಗೆಯು ಹೆಚ್ಚಿದೆ
ನೀರೂ ಇಲ್ಲ ಗಾಳಿಯಿಲ್ಲ!
ಮೃಗ ಪಕ್ಷಿಗಳ ದನಿಯು ನಿಮಗೆ
ಕೂಗಿನಂತೆ ಕೇಳದೇ?
ಮೇವು ಸಿಗದು ನೀರೂ ಸಿಗದು
ಹಾಡಲೆಲ್ಲಿ ದನಿಯಿದೆ?
ಮುದ್ದು ಮಕ್ಕಳೆಲ್ಲ ಬನ್ನಿ
ನೀರು ಕಾಳು ನೀಡುವಾ
ಬತ್ತಿಹೋದ ಮರಗಳಿಗೆ
ಕೊಡದಿ ನೀರು ಹಾಕುವಾ!
ಮರದ ಕೊಂಬೆಗೆಲ್ಲ ಕಟ್ಟಿ
ಮಡಿಕೆಯಲ್ಲಿ ನೀರನು
ಅಷ್ಟೋ ಇಷ್ಟೋ ಕಾಳು ಎರಚಿ
ನೀಡಿ ಬದುಕು ನೆರಳನು!
ಮನುಜರಂತೆ ಮಾತು ಬರದು
ಮೂಕ ಪ್ರಾಣಿ ಅವುಗಳು
ಬದುಕಿಬರಲಿ ಕೋಟಿ ವರುಷ
ಪುಟ್ಟ ಪುಟ್ಟ ಜೀವಗಳು!

■ **ಕುಮಾರ ಚಲವಾದಿ ಹಾಸನ**

# ಜಾಣನಾಗುವೆ

ಹಕ್ಕಿಯಾಗುವೆ ನಾನು
ಹಕ್ಕಿಯಾಗುವೆ
ಹಕ್ಕಿಯಾಗಿ ಬಾನಿನಲ್ಲಿ
ಹಾರಿ ನಲಿಯುವೆ

ವೃಕ್ಷವಾಗುವೆ ನಾನು
ವೃಕ್ಷವಾಗುವೆ
ವೃಕ್ಷವಾಗಿ ಹಣ್ಣು ನೆರಳು
ಜಗಕೆ ನೀಡುವೆ

ಮೋಡವಾಗುವೆ ನಾನು
ಮೋಡವಾಗುವೆ
ಮೋಡವಾಗಿ ಜಗಕೆ ನಾನು
ಮಳೆಯ ಸುರಿಸುವೆ

ಸೂರ್ಯನಾಗುವೆ ನಾನು
ಸೂರ್ಯನಾಗುವೆ
ಸೂರ್ಯನಾಗಿ ಜಗಕೆ ನಾನು
ಬೆಳಕು ನೀಡುವೆ

ವೈದ್ಯನಾಗುವೆ ನಾನು
ವೈದ್ಯನಾಗುವೆ
ವೈದ್ಯನಾಗಿ ರೋಗವನ್ನು
ವಾಸಿ ಮಾಡುವೆ

ಜಾಣನಾಗುವೆ ನಾನು
ಜಾಣನಾಗುವೆ
ಜಾಣನಾಗಿ ಹೆತ್ತವರಿಗೆ
ಕೀರ್ತಿ ತರುವೆ

■ **ವೆಂಕಟೇಶ ಚಾಗಿ**



ಶಿಲ್ಪಾ ಕಬ್ಬಿಣಕಂತಿ